## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

ಸಂಖ್ಯೆ:ಎ8/ಆನ್.ನೈ.ಪ್ರ.ಪತ್ರ/25/2019-20 ದಿನಾಂಕ:30.10.2019

**:: ಸುತ್ತೋಲೆ ::**

ವಿಷಯ:- ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಅಂಕಪಟ್ಟಿ ನೈಜತೆ ಪರಿಶೀಲನೆಯನ್ನು ಆನ್‌ಲೈನ್ ಮುಖಾಂತರ ನಿರ್ವಹಿಸುವ ಬಗ್ಗೆ.

ಉಲ್ಲೇಖ:- ಮಾನ್ಯ ಮುಖ್ಯ ಕಾರ್ಯದರ್ಶಿಗಳ ಆದೇಶ ಹಾಗೂ ಪ್ರಗತಿ-10ರ ಅನುಷ್ಠಾನದಂತೆ.

* * * * * *

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ಪರೀಕ್ಷಾ ಏಕೀಕರಣ ನಿರ್ವಹಣಾ ವ್ಯವಸ್ಥೆ ಪ್ರಗತಿ-10 ಯೋಜನೆಯಡಿಯಲ್ಲಿ 2018 ರಿಂದ ಬಹುತೇಕ ಪರೀಕ್ಷಾ ಚಟುವಟಿಕೆಗಳನ್ನು ತಾಂತ್ರಿಕವಾಗಿ ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಮುಂದುವರೆದು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಅಂಕಪಟ್ಟಿಯ ನೈಜತೆಯನ್ನು ಆನ್‌ಲೈನ್ ಮುಖಾಂತರ ನಿರ್ವಹಿಸುವ ವ್ಯವಸ್ಥೆಯನ್ನು ಕಲ್ಪಿಸಲು ಉದ್ದೇಶಿಸಲಾಗಿದೆ. ವಿವರಗಳು ಕೆಳಕಂಡಂತಿದೆ.

**:: ಅಂಕಪಟ್ಟಿ ನೈಜತೆ ಪ್ರಮಾಣ ಪತ್ರವನ್ನು ಪಡೆಯಲು ಪ್ರಸ್ತುತ ಚಾಲ್ತಿಯಲ್ಲಿರುವ ವಿಧಾನ ::**

ಅಂಕಪಟ್ಟಿ ನೈಜತೆ ಪ್ರಮಾಣ ಪತ್ರವನ್ನು ಪಡೆಯಲಿಚ್ಚಿಸುವ ನೇಮಕಾತಿ ಪ್ರಾಧಿಕಾರಗಳು ನಿಗಧಿತ ಶುಲ್ಕ ಹಾಗೂ ಮೂಲ ಅಂಕಪಟ್ಟಿಯೊಂದಿಗೆ ಸಂಬಂಧಿಸಿದ ವಿಭಾಗೀಯ ಕಛೇರಿಗಳಿಗೆ/ಮಂಡಳಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿತ್ತು. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಮಂಡಳಿಯಲ್ಲಿನ ಸಂಪುಟದೊಂದಿಗೆ ಮೂಲ ಅಂಕಪಟ್ಟಿಯನ್ನು ತಾಳೆ ಮಾಡಿ ನಂತರ ನೈಜತೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ಪ್ರಾಧಿಕಾರಕ್ಕೆ ರವಾನಿಸಲಾಗುತ್ತಿತ್ತು. ಇದರಿಂದ ಸದರಿ ಪ್ರಮಾಣ ಪತ್ರವನ್ನು ಪಡೆಯಲು ಹೆಚ್ಚಿನ ಕಾಲಾವಕಾಶದ ಜೊತೆಗೆ ಈ ರೀತಿಯ ಪತ್ರವ್ಯವಹಾರವನ್ನು ತಡೆಗಟ್ಟಿ ಅರ್ಜಿದಾರರು ಇದ್ದಲ್ಲಿಯೇ ಸದರಿ ಸೇವೆಯನ್ನು ಆನ್‌ಲೈನ್ ಮೂಲಕ ಪಡೆಯುವುದು ಸೂಕ್ತವೆಂದು ಮನಗಂಡು ಈ ಸೌಲಭ್ಯವನ್ನು ಕಲ್ಪಿಸಲಾಗಿದೆ.

**:: ಇನ್ನು ಮುಂದೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಅಂಕಪಟ್ಟಿ ನೈಜತೆ ಪರಿಶೀಲನೆಯನ್ನು ಆನ್‌ಲೈನ್ ಮೂಲಕ ಪಡೆಯಲು ಅನುಸರಿಸಬೇಕಾದ ವಿಧಾನ ::**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಜಾಲತಾಣ http://www.kseeb.kar.nic.in ರ ಮೂಲಕ ನೇರವಾಗಿ ಅಂಕಪಟ್ಟಿ ನೈಜತೆ ಪ್ರಮಾಣ ಪತ್ರ ಬಯಸುವ ನೇಮಕಾತಿ ಪ್ರಾಧಿಕಾರವು ಮನವಿಯನ್ನು ಸಲ್ಲಿಸಬಹುದಾಗಿದ್ದು, ನಿಗಧಿತ ಶುಲ್ಕ ರೂ.350/-ಗಳನ್ನು ಆನ್‌ಲೈನ್ ಮುಖಾಂತರ ಯಾವುದೇ ಬ್ಯಾಂಕಿನ ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡ್, PAYTM ಮತ್ತು UPI PAYMENT ಮೂಲಕ ಅಥವಾ ಈ ಸೌಲಭ್ಯ ಇಲ್ಲದವರು ಆಫ್‌ಲೈನ್ ಚಲನ್ ಅನ್ನು ಸದರಿ ಜಾಲತಾಣದಲ್ಲಿ ಡೌನ್‌ಲೋಡ್ ಮಾಡಿಕೊಂಡು ಯಾವುದಾದರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಾವತಿಸಬೇಕಾಗಿರುತ್ತದೆ. ಆಫ್‌ಲೈನ್ ಚಲನ್ ಮುಖಾಂತರ ಶುಲ್ಕ ಪಾವತಿಸುವವರು ನಿಗಧಿತ ಶುಲ್ಕ ರೂ.350/- ಗಳೊಂದಿಗೆ ಸೇವಾ ಶುಲ್ಕ ರೂ.5/--ನ್ನು ಸೇರಿಸಿ ಒಟ್ಟು ರೂ.355/-ಗಳನ್ನು ಬ್ಯಾಂಕ್‌ನಲ್ಲಿ ಪಾವತಿಸಬೇಕು. ಮುಖಪುಟ ಮತ್ತು ಅಂಕಪಟ್ಟಿಯನ್ನು ಪಿಡಿಎಫ್‌ನಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವುದು. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ಜಾಲತಾಣದಲ್ಲಿ ನಮೂದಿಸಿರುವ ಮೊಬೈಲ್ ಸಂಖ್ಯೆಗೆ ಸಂದೇಶವನ್ನು ರವಾನಿಸಲಾಗುತ್ತದೆ. ಈ ಸಂದೇಶವನ್ನು ಸ್ವೀಕರಿಸಿದ ಅರ್ಜಿದಾರರು ಮಂಡಳಿಯ ಜಾಲತಾಣಕ್ಕೆ ಭೇಟಿ ನೀಡಿ ತಮ್ಮ ಅರ್ಜಿಸಂಖ್ಯೆಯನ್ನು ನಮೂದಿಸಿ ನೈಜತೆಯ ಬಗ್ಗೆ ಸೃಜಿಸಲಾದ ಪ್ರಮಾಣಪತ್ರದ ಮಾಹಿತಿ ಪಡೆಯಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ 10 ದಿನಗಳಲ್ಲಿ ತ್ವರಿತ ಅಂಚೆ ಮೂಲಕ ಸಹಿಯುಳ್ಳ ನೈಜತೆ ಪ್ರಮಾಣಪತ್ರವನ್ನು ಅರ್ಜಿಯ ಮುಖಪುಟದಲ್ಲಿರುವ ವಿಳಾಸಕ್ಕೆ ರವಾನಿಸಲಾಗುತ್ತದೆ.

**ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ.**

**ಅರ್ಜಿದಾರರು ಅನುಸರಿಸಬೇಕಾದ ಕ್ರಮಗಳು**

1) ಅಂಕಪಟ್ಟಿಯ ನೈಜತೆಯ ಪರಿಶೀಲನೆಗೆ ಅರ್ಜಿ ಸಲ್ಲಿಸಲು ಅರ್ಜಿದಾರರು https://kseeb.karnataka.gov.in/markscardverification/ ವೆಬ್‌ಸೈಟ್ ನಲ್ಲಿ Requester Details ಅನ್ನು ಕ್ಲಿಕ್ ಮಾಡಿ ಸೂಕ್ತ Organisation ಆಯ್ಕೆ ಮಾಡಿಕೊಂಡ ನಂತರ ಸದರಿ ಅರ್ಜಿದಾರರ ನಿಖರ ಮಾಹಿತಿಗಳನ್ನು ನಮೂದಿಸಬೇಕು.

Scanned by CamScanner

2) Generate OTP ಅನ್ನು ಕ್ಲಿಕ್ ಮಾಡಿ ಅರ್ಜಿದಾರರ ಮೊಬೈಲ್ ಸಂಖ್ಯೆಯಲ್ಲಿ ಸ್ವೀಕೃತವಾದ OTP ಅನ್ನು ನಮೂದಿಸಿ Validate ಮಾಡುವುದು.

3) ಅರ್ಜಿದಾರರು ಸಂಬಂಧಪಟ್ಟ Covering Letter ಅನ್ನು PDF ನಮೂನೆಯಲ್ಲಿ (500KB to 1 MB ) ಅಪ್ಲೋಡ್ ಮಾಡಿದ ನಂತರ ಬಂದಂತಹ ಅಪ್ಲಿಕೇಶನ್ ನಂಬರ್ ಅನ್ನು ಮುಂದಿನ ಯಾವುದೇ ಮಾಹಿತಿಗಾಗಿ ಸುರಕ್ಷಿತವಾಗಿ ಇಟ್ಟುಕೊಳ್ಳುವುದು.

4) Students details -> Enter register no. -> click here to EnterMarkscard details..ನಂತರ ಸದರಿ ಮಾಹಿತಿಯನ್ನು ನಮೂದಿಸುವುದು ಹಾಗೂ ಸಂಬಂಧಪಟ್ಟ ಅಂಕಪಟ್ಟಿಯನ್ನು ಸ್ಕ್ಯಾನ್ ಮಾಡಿ PDF ನಮೂನೆಯಲ್ಲಿ (500KB to 1 MB ) ಅಪ್ಲೋಡ್ ಮಾಡುವುದು.

5) Make payment --> Enter register no. --> View -> Confirm --> Make Payment

6) ನಿಗಧಿತ ಶುಲ್ಕವನ್ನು ಆನ್‌ಲೈನ್ ಮುಖಾಂತರ ಯಾವುದೇ ಬ್ಯಾಂಕಿನ ಕ್ರೆಡಿಟ್‌ಕಾರ್ಡ್ ಹಾಗೂ ಡೆಬಿಟ್‌ಕಾರ್ಡ್, Paytm ಮತ್ತು UPI PAYMENT ಮೂಲಕ ಪಾವತಿ ಮಾಡುವುದು. ಈ ಸೌಲಭ್ಯವಿಲ್ಲದವರು ಆಫ್‌ಲೈನ್‌ನಲ್ಲಿ ಚಲನ್‌ನನ್ನು ಸದರಿ ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಂಡು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಾವತಿಸಬೇಕಾಗಿರುತ್ತದೆ ತದನಂತರ ಸದರಿ ಮಾಹಿತಿಯನ್ನು ಅರ್ಜಿದಾರರ ಮೊಬೈಲ್ ಸಂಖ್ಯೆಗೆ ರವಾನಿಸಲಾಗುತ್ತದೆ.

7) ಕಛೇರಿಯ 10 ಕಾರ್ಯದಿನಗಳೊಳಗಾಗಿ ಸಂಬಂಧಪಟ್ಟ ಅರ್ಜಿದಾರರ ಮೊಬೈಲ್ ಸಂಖ್ಯೆಗೆ **your Report is ready to download** ಎಂದು ಮೆಸ್ಸೇಜ್ ಬಂದ ನಂತರ ಅರ್ಜಿದಾರರು ವರದಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ವಿಭಾಗಿಯ ಕಛೇರಿಗಳಿಂದ ಅಧಿಕೃತ ವರದಿಯನ್ನು speedpost ಮೂಲಕ ಕಳುಹಿಸಲಾಗುವುದು. ಒಂದುವೇಳೆ **Reject** ಆದ ಸಂದರ್ಭದಲ್ಲಿ **Reject** ಗೆ ನೀಡಿರುವ ಕಾರಣಾನುಸಾರ ದಾಖಲಾತಿಗಳನ್ನು ಪುನ: ಅಪ್ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಈ ಕ್ರಮದಿಂದಾಗಿ ಅರ್ಜಿದಾರರಿಗೆ ವಿಭಾಗವಾರು ಅಂಕಪಟ್ಟಿ ನೈಜತಾ ವರದಿಗಳು ಲಭ್ಯವಾಗುವುದಲ್ಲದೇ ಈ ಬಗ್ಗೆ ಪ್ರತಿ ಹಂತದಲ್ಲಿಯೂ SMS ಆಧಾರಿತ ಮಾಹಿತಿಯನ್ನು ಪಡೆಯುವಂತೆ ವ್ಯವಸ್ಥೆ ಮಾಡಲಾಗಿದೆ.

ಮೇಲ್ಕಂಡ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಲು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು, ವಿದ್ಯಾರ್ಥಿಗಳು/ಪೋಷಕರುಗಳಿಗೆ ವ್ಯಾಪಕ ಪ್ರಚಾರ ನೀಡಲು ತಿಳಿಸಿದೆ.

(ಮಾನ್ಯ ಆಯುಕ್ತರು, ಸಾಶಿಇ ರವರ ಆದೇಶಾನುಸಾರ)

(ವಿ.ಸುಮಂಗಲ) 20/10/15
ನಿರ್ದೇಶಕರು, ಪರೀಕ್ಷೆಗಳು

**ಪ್ರತಿಯನ್ನು:**

1) ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ವಿಭಾಗೀಯ ಕಛೇರಿ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3) ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
4) ಕಛೇರಿ ಪ್ರತಿ.

Scanned by CamScanner